ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 03.12.2024.

**ಮುಂದುವರೆದ ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ ಪಿ.ವಿ.ಎ. ವಕೀಲರಿಂದಃ

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಪ್ರಸ್ತಾಪಿತ ಕಟ್ಟಡ Estimate ನ್ನು ತಕರಾರಿಗೆ ಒಳಪಟ್ಟು ನಿಪಿ-10 ಎಂದು, ನನ್ನ ಮಾರಾಟಗಾರನ ಪ್ರಮಾಣ ಪತ್ರವನ್ನು ನಿಪಿ-11 ಎಂದು, ಖಾತಾ ಎಕ್ಸಾಟ್ರ್ಯಾಕ್ಟ್ ನಿಪಿ-12 ಎಂದು, ಬೆರಳಚ್ಚು ಪ್ರತಿಯನ್ನು ನಿಪಿ-12(ಎ) ಎಂದು, ಎರಡು ಸರ್ಟಿಫಿಕೇಟ್‌ಗಳನ್ನು ಕ್ರಮವಾಗಿ ನಿಪಿ-13 ಮತ್ತು ನಿಪಿ-14 ಎಂದು, ಮೂರು ಇಸಿಗಳನ್ನು ಕ್ರಮವಾಗಿ ನಿಪಿ-15 ರಿಂದ ನಿಪಿ-17 ಎಂದು, ಮೂರು ಕಂದಾಯ ರಶೀದಿಗಳನ್ನು ಕ್ರಮವಾಗಿ ನಿಪಿ-18 ರಿಂದ ನಿಪಿ-20 ಎಂದು ತಕಾರಿಗೆ ಒಳಪಟ್ಟು ಗುರುತಿಸಲಾಯಿತು.

ಆದ್ದರಿಂದ ನಾನು ನನ್ನ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಆರ್.ಜೆ.ಪಿ. ವಕೀಲರಿಂದಃ

ನಾವು 5 ಜನ ಅಣ್ಣ-ತಮ್ಮಂದಿರು ಇರುತ್ತೇವೆ, ಅವರೇಂದರೆ, ನಾನು, ಅಶೋಕ ಕುಮಾರು, ಮುರಳಿಧರ್ ಅಂದರೆ ಪ್ರತಿವಾದಿ, ಮುಕ್ಕುಂದ ಮತ್ತು ಮೋಹನ ಇರುತ್ತೇವೆ. ನನಗೆ ಮೂರು ಅಕ್ಕ-ತಂಗಿಯರು ಇರುತ್ತಾರೆ ಅವರೇಂದರೆ, ಸರೋಜಾ, ಶಾಲಿನಿ ಮತ್ತು ರೇಖಾ ಇರುತ್ತಾರೆ. ನನ್ನ ಮೂರು ಜನ ಅಕ್ಕ-ತಂಗಿಯರು ಜೀವಂತ ಇದ್ದಾರೆ. ನಾನು ಎಲ್ಲರಿಗಿಂತ ದೊಡ್ಡವನು ಎಂದರೆ ಸರಿ. ನಮ್ಮ ನಾಲ್ಕು ಜನ ಅಣ್ಣ-ತಮ್ಮಂದಿರ ಪೈಕಿ ನಾನು, ಅಶೋಕ ಮತ್ತು ಮುಕ್ಕುಂದ ಮೂರು ಜನ ಕೆ.ಇ.ಬಿ.ಯಲ್ಲಿ ಕೆಲಸ ಮಾಡುತ್ತಿದ್ದೇವು ಈಗ ನಿವೃತ್ತಿ ಹೊಂದಿರುತ್ತೇವೆ. ಮೋಹನ ರವರು

ಸೋಲಾಪುರದಲ್ಲಿ ಎನ್.ಐ.ಸಿ. ದಲ್ಲಿ ಕೆಲಸ ಮಾಡುತ್ತಿದ್ದರು. ಪ್ರತಿವಾದಿ ಒಂದು ಬೆರಳಚ್ಚು ಸಂಸ್ಥೆ ಇಟ್ಟುಕೊಂಡಿರುತ್ತಾರೆ. ಪ್ರತಿ ವಾದಿಗೆ ಯಾವುದೇ ಸರ್ಕಾರಿ ಸೇವೆ ಇಲ್ಲ ಎಂದರೆ ಸರಿ.

ನಮ್ಮ ಎಲ್ಲ ಸಹೋದರರ ಹಾಗೂ ನನ್ನ ಮದುವೆಯನ್ನು ನನ್ನ ತಂದೆ ಜೀವಂತ ಕಾಲಕ್ಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇದ್ದಾಗ ಮೋಹನ್, ಮುಕ್ಕುಂದ ರವರ ಮದುವೆಯಾಗಿರಲಿಲ್ಲ. ನನ್ನ ತಂದೆ ಇರುವಾಗ ನನ್ನ ಇಬ್ಬರು ಅಕ್ಕ-ತಂಗಿಯವರಾದ ಸರೋಜಾ ಹಾಗೂ ಶಾಲಿನಿ ರವರ ಮದುವೆಯಾಗಿತ್ತು. ನನ್ನ ತಂದೆ ಜೀವಂತ ಕಾಲಕ್ಕೆ ಪತ್ರಾಂಕಿತ ಕಛೇರಿಯಲ್ಲಿ ಪ್ರ.ದ.ಸಹಾಯಕರು ಆಗಿದ್ದರು. ನನ್ನ ತಂದೆ ಸರ್ಕಾರಿ ಸೇವೆಯಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ಕಲಬುರಗಿ, ಶಹಬಾದ್ ಮತ್ತು ಆಳಂದದಲ್ಲಿ ಸೇವೆ ಸಲ್ಲಿಸಿರುತ್ತಾರೆ. ಅವರ ನಿವೃತ್ತಿ ಕೂಡಾ ಆಳಂದದಲ್ಲಿಯೇ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಕಲಬುರಗಿಯಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ.

ಆಳಂದದಲ್ಲಿ ನನ್ನ ತಂದೆ ಎಷ್ಟು ವರ್ಷ ಸೇವೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಆಳಂದದಲ್ಲಿರುವಾಗ ದಾವಾ ಸ್ವತ್ತಿನಲ್ಲಿ ಇರುತ್ತಿದ್ದರು ಎಂದರೆ ಸರಿ. ನಾನು ಹುಟ್ಟಿದಾಗಿನಿಂದ ನಿವೃತ್ತಿ ಆಗುವವರೆಗೂ ಆಳಂದದಲ್ಲಿ ಇರುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ತಂದೆ ಶಂಕರ ರಾವ್ ರವರು ಜೀವಂತ ಇದ್ದಾಗ ಮನೆಯ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಸಹೋದರ ಅಶೋಕ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನಮ್ಮ ಎಲ್ಲ ಸಹೋದರರ ಮತ್ತು ಸಹೋದರಿಯರ ಜನನ ದಾವಾ ಸ್ವತ್ತಿನಲ್ಲಿಯೇ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು 1965ರಲ್ಲಿ ನೌಕರಿಗೆ ಸೇರಿರುತ್ತೇನೆ. ನನ್ನನ್ನು ನೌಕರಿಗೆ ನನ ತಂದೆಯ ಶಿಫಾರಸ್ ಮೇರೆಗೆ ನಾನು ಸೇರಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಹೋದರ ಮುಕ್ಕುಂದ ರವರ ನೌಕರಿಗೆ ನಾನು ಶಿಫಾರಸ್ ಮಾಡಿರುತ್ತೇನೆ. ಮುಕ್ಕುಂದ ರವರು ಯಾವತ್ತು

ನೌಕರಿಗೆ ಸೇರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನನ್ನ ಉಳಿದ ಸಹೋದರರಾದ ಮುಕ್ಕುಂದ, ಮೋಹನ್ ಮತ್ತು ಅಶೋಕ ರವರು ಕಲಬುರಗಿಯಲ್ಲಿ ಮನೆ ಕಟ್ಟಿ ತಮ್ಮ ಕುಟುಂಬದೊಂದಿಗೆ ವಾಸವಾಗಿದ್ದಾರೆ ಎಂದರೆ ಸರಿ. ಅವರು ಮನೆಗಳನ್ನು ಕಟ್ಟಿ ಎಷ್ಟು ವರ್ಷವಾಯಿತು ಎಂದು ನನಗೆ ಗೊತ್ತಿಲ್ಲ. ಸದ್ಯ ನನಗೆ 81 ವರ್ಷ ವಯಸ್ ಇರುತ್ತದೆ, ನಾನು ನಿವೃತ್ತಿ ಹೊಂದಿ ಸುಮಾರು 20 ವರ್ಷವಾಗಿರುತ್ತದೆ. ನನಗೆ 21 ವರ್ಷ ವಯಸ್ ಇದ್ದಾಗ ನನಗೆ ನೌಕರಿ ಸಿಕ್ಕಿರುತ್ತದೆ. ನಾನು ಕೆ.ಇ.ಬಿ.ಯಲ್ಲಿ ನೌಕರಿಗೆ ಸೇರಿಕೊಳ್ಳುವಾಗ ದ್ವಿ.ದ.ಸ ಅಂತ ಸೇರಿಕೊಂಡಿರುತ್ತೇನೆ. ನಾನು ನೌಕರಿಗೆ ಸೇರಿಕೊಂಡಾಗ ನನ್ನ ಸಂಭಳ ಎಷ್ಟು ಇತ್ತು ಎಂದು ನನಗೆ ನೆನಪು ಇರಲ್ಲ. ನಾನು ನೌಕರಿಗೆ ಸೇರಿದಾಗ ನನ್ನ ಮದುವೆ ಆಗಿರಲಿಲ್ಲ. ನಾನು ನೌಕರಿಗೆ ಸೇರಿಕೊಂಡ 2 ವರ್ಷಕ್ಕೆ ನನ್ನ ಮದುವೆ ಆಗಿರುತ್ತದೆ. ನನ್ನ ಮದುವೆಯ ಖರ್ಚನ್ನು ನಾನೇ ಸ್ವಂತ ಭರಿಸಿರುತ್ತೇನೆ. ನನ್ನ ಮದುವೆಗೆ ಎಷ್ಟು ಖರ್ಚು ಆಯಿತು ಎಂದು ನನಗೆ ನೆನಪು ಇಲ್ಲ.

ನನಗೆ ಮೂರು ಜನ ಮಕ್ಕಳು, ಅವರ ಪೈಕಿ ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಗಂಡು ಮಗ ಇರುತ್ತಾನೆ. ಅವರೆಂದರೆ, ಅಂಜಲಿ, ಅಪರ್ಣ ಹಾಗೂ ಅನೀಲ್ ಇರುತ್ತಾರೆ. ನನ್ನ ಮಕ್ಕಳ ಎಲ್ಲರ ಮದುವೆಯಾಗಿರುತ್ತದೆ. ನಾನು ಶಹಬಾದ್‌ದಲ್ಲಿ ಮಾತ್ರ ಮನೆ ಮಾಡಿಕೊಂಡು ಇದ್ದೆ, ಆದರೆ ಕಲಬುರಗಿಯಲ್ಲಿ ಇರುವಾಗ ಇಲಾಖೆಯ ವಸತಿ ಗೃಹದಲ್ಲಿ ಇರುತ್ತಿದ್ದೆ. ತದನಂತರ ನಾನು ತಮ್ಮನಾದ ಅಶೋಕ ರವರ ಮನೆಯಲ್ಲಿ ಇದ್ದೆ. ನಾನು ನೌಕರಿಗೆ ಸೇರಿದ ನಂತರ ಆಳಂದದಲ್ಲಿ ಇರಲಿಲ್ಲ ಎಂದರೆ ಸರಿ. ಅಂದರೆ ನನ್ನ ಹೆಡ್ ಕ್ವಾ ಟರ್ ಕಲಬುರಗಿ ಎಂದರೆ ಸರಿ. ದಾವಾ ಸ್ವತ್ತು ನನ್ನ ಸ್ವಂತ ಗಳಿಸಿದ ಆಸ್ತಿ ಇರುತ್ತದೆ. ನಾನು ಲಕ್ಷ್ಮಣರಾವ್ ಸಿಡಗುಬಕರ್ ರವರಿಂದ ರೂ.400/-ಗೆ 1972ರಲ್ಲಿ ಖರೀದಿ ಮಾಡಿರುತ್ತೇನೆ. ಅದು ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ನಾನು ಮಾರಾಟ ಹಣವನ್ನು ಅಡಿ ಲೆಕ್ಕದಲ್ಲಿ ಕೊಟ್ಟಿಲ್ಲ ಒಟ್ಟಾಗಿ ಕೊಟ್ಟಿರುತ್ತೇನೆ.

ನಾನು ಖರೀದಿ ಹಿಡಿದ ಸ್ವತ್ತಿನ ವ್ಯವಹಾರ ಆಳಂದದಲ್ಲಿ ಎಲ್ಲಿ ಆಗಿರುತ್ತದೆ ಎಂದು ನನಗೆ ನೆನಪು ಇಲ್ಲ. ಖರೀದಿ ವ್ಯವಹಾರ ಕಾಲಕ್ಕೆ ರಘುನಾಥ ರಾವ್ ಮಜುಮದಾರ, ಸಿದ್ದಪ್ಪ ಮಾಸ್ತರ ರವರು ಹಾಜರಿದ್ದರು. ನಮ್ಮ ಕುಟುಂಬದ ವತಿಯಿಂದ ನಾನು, ನನ್ನ ಸಹೋದರ ಅಶೋಕ ರವರು ಹಾಜರಿದ್ದೇವು. ಅವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಮೇಲೆ ಹೇಳಿದ ಸಾಕ್ಷಿದಾರರ ಪೈಕಿ ರಘುನಾಥ ಜೀವಂತ ಇರುತ್ತಾರೆ, ಸಿದ್ದಪ್ಪ ತಿರಿಕೊಂಡಿರುತ್ತಾರೆ. ಖರೀದಿ ಮಾತುಕತೆಯಾದ ತಕ್ಷಣ ಕ್ರಯ ಪತ್ರ ಆಗಿರುತ್ತದೆ. ಆ ಸಮಯದಲ್ಲಿ ನಾನು ನೌಕರಿಯಲ್ಲಿ ಇದ್ದೆ. ನಾನು ಮನೆ ಖರೀದಿ ಹಿಡಿಯುವ ಕಾಲಕ್ಕೆ ನಮ್ಮ ಇಲಾಖೆಯ ಮೇಲಾಧಿಕಾರಿಗಳಿಂದ ಅನುಮತಿ ಪತ್ರ ಪಡೆದಿರುವುದಿಲ್ಲ. ಸದರಿ ಖರೀದಿ ಪತ್ರವನ್ನು ಎಂ.ಎಸ್. ಕುಲಕರ್ಣಿ ಅಂದರೆ ಪ್ರತಿವಾದಿ ಬೆರಳಚ್ಚು ಮಾಡಿರುತ್ತಾರೆ. ಮೇಲೆ ಹೇಳಿದವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಅದೇ ರೀತಿ ಇನ್ನೊಬ್ಬ ಸಾಕ್ಷಿದಾರರಾದ ವಿಠ್ಠಲ್ ರವಾವ್ ಹಾಜರಿದ್ದರು ಆದರೆ ಈಗ ಅವರು ತಿರಿಕೊಂಡಿರುತ್ತಾರೆ.

ಖರೀದಿ ಆದ ತಕ್ಷಣ ನಾನು ಕಟ್ಟಡ ಪ್ರಾರಂಭಿಸಿರುತ್ತೇನೆ. ಸದರಿ ಕಟ್ಟಡದ Estimate ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆದರೆ ದಾಖಲಾತಿ ಹಾಜರುಪಡಿಸಿರುತ್ತೇನೆ. ನಾನು ಖರೀದಿ ಮಾಡಿದ ಸಂಪೂರ್ಣ ಪ್ಲಾಟ್‌ನಲ್ಲಿ ಮನೆ ಕಟ್ಟಿರುತ್ತೇನೆ, ಜಾಗ ಬಿಟ್ಟಿರುವುದಿಲ್ಲ. ನಾನು ನೆಲ ಮಹಡಿ ಮಾತ್ರ ಕಟ್ಟಿರುತ್ತೇನೆ. ಸದರಿ ಕಟ್ಟಡವನ್ನು ಸೀಮೆಂಟ್‌ನಿಂದ ಕಟ್ಟಿದೆ ಎಂದರೆ, ಸಾಕ್ಷಿ ಮಣ್ಣಿನಿಂದ ಕಟ್ಟಿದೆ ಎಂದು ನುಡಿಯುತ್ತಾರೆ. ಒಟ್ಟು 5 ರೂಂಗಳು ಹಾಗೂ ಡಬ್ಲೂಸಿ ಹಾಗೂ ಬಾತ್‌ರೂಂ ಕಟ್ಟಿರುತ್ತೇನೆ. ಸದರಿ ಕಟ್ಟಡಕ್ಕೆ ಸುಮಾರು ರೂ.70 ಸಾವಿರ ದಿಂದ ರೂ.1 ಲಕ್ಷ ಖರ್ಚು ಆಗಿರಬಹುದು, ಆದರೆ ನಿಖರವಾಗಿ ಗೊತ್ತಿಲ್ಲ. ಸದರಿ ಕಟ್ಟಡ ಕಟ್ಟುವಾಗ ನನ್ನ ಸಹೋದರರು ಯಾರು ಸಹಾಯ ಮಾಡಿರುವುದಿಲ್ಲ. ನಮ್ಮ ಇಲಾಖೆಯಿಂದ ರೂ.20 ರಿಂದ ರೂ.25 ಸಾವಿರ ವರೆಗೆ ಸಾಲ ಪಡೆದುಕೊಂಡಿರುತ್ತೇನೆ, ಆದರೆ ನನಗೆ ನಿಖರವಾಗಿ ಸಾಲ ಪಡೆದುಕೊಂಡ ಬಗ್ಗೆ ನನಗೆ ನೆನಪು ಇಲ್ಲ.

ಸಾಲ ಪಡೆದುಕೊಂಡ ಪೈಕಿ ಪ್ರತಿ ತಿಂಗಳು ರೂ.250/- ಕಡಿತಗೊಳಿಸುತ್ತಿದ್ದೆ. ನಾನು ಸದರಿ ಸಾಲವನ್ನು ಅಡಮಾನ ರೂಪದಲ್ಲಿ ಪಡೆದುಕೊಂಡಿರುತ್ತೆನೆ.ನಂತರ ಸದರಿ ಅಡಮಾನವನ್ನು ರದ್ದು ಪಡಿಸಿಕೊಂಡಿರುತ್ತೆನೆ.

ಸದರಿ ಅಡಮಾನ ಪತ್ರ ಮತ್ತು ರದ್ದತಿ ಪತ್ರಕ್ಕೆ ಸಾಕ್ಷಿದಾರರು ಅಂತ ಯಾರ ಸಹಿ ಕೂಡಾ ಪಡೆದುಕೊಂಡಿರುವುದಿಲ್ಲ. ಖರೀದಿ ಮಾಡಿದ ನಂತರ ಅದೇ ವರ್ಷ ಅಡಮಾನ ಪತ್ರ ಮಾಡಿಕೊಂಡಿರುತ್ತೇನೆ. ನಾನು ಸುಮಾರು 1 ವರ್ಷದವರೆಗೆ ಕಟ್ಟಡ ಮಾಡಿಕೊಂಡಿರುತ್ತೇನೆ. ಯಾವ ವರ್ಷದಿಂದ ಯಾವ ವರ್ಷದವರೆಗೆ ಕಟ್ಟಡ ಸಂಪೂರ್ಣ ವಾಗಿದೆ ಎಂದು ನನಗೆ ನೆನಪು ಇರುವುದಿಲ್ಲ, ಆದರೆ 1975ರಲ್ಲಿ ಮನೆಯ ಗೃಹ ಪ್ರವೇಶವಾಗಿರುತ್ತದೆ. ಮನೆಯ ಕಟ್ಟಡ ಸಂಪೂರ್ಣವಾದ ನಂತರ ನಮ್ಮ ಇಲಾಖೆಗೆ ಮಾಹಿತಿ ಸಲ್ಲಿಸಿರುತ್ತೇನೆ. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಅದೇ ರೀತಿ ಪುರಸಭೆಗೆ ಕೂಡಾ ಕಟ್ಟಡ ಸಂಪೂರ್ಣವಾದ ಬಗ್ಗೆ ಮಾಹಿತಿ ಕೊಟ್ಟಿರುತ್ತೇನೆ, ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನನ್ನ ತಂದೆ ಯಾವ ವರ್ಷದಲ್ಲಿ ತಿರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ, ಆದರೆ 1992 ಅಥವಾ 1996ರಲ್ಲಿ ಇರಬಹುದು, ನನ್ನ ತಾಯಿ 1920ರಲ್ಲಿ ತಿರಿಕೊಂಡಿರುತ್ತಾರೆ. ದಾವಾ ಸ್ವತ್ತು ಈಗ ನನ್ನ ಹಸೆರಿನಲ್ಲಿ ಇರುತ್ತದೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ದಾವಾ ಸ್ವತ್ತು ಸದ್ಯ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಪ್ರತಿವಾದಿ ಹೆಸರಿನಲ್ಲಿ ಆಗಿದ್ದರ ಬಗ್ಗೆ ಸುಮಾರು 4 ತಿಂಗಳ ಹಿಂದೆ ಗೊತ್ತಾಗಿರುತ್ತದೆ. ಪ್ರತಿವಾದಿ ಹೆಸರಿನಲ್ಲಿ ಆದ ಮ್ಯೂಟೇಷನ್‌ನ್ನು ನಾನು ಪ್ರಶ್ನೆ ಮಾಡಿಲ್ಲ. ಅನೀಲ್ ನನ್ನ ದೊಡ್ಡ ಮಗ, ಆತ ಮುಂಬೈಯಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಾನೆ ಆತನ ಮದುವೆಯಾಗಿರುತ್ತದೆ. ನನ್ನ ಮಗ ಅನೀಲ್ 2003ರಲ್ಲಿ ಐಶ್ವರ್ಯ ಫೈನಾನ್ಸ್ ದಲ್ಲಿ ರೂ.2 ಲಕ್ಷ ಸಾಲ ಪಡೆದುಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಆತ ಸುಭಾಶ್

ಕಟಾರೆ ರವರಿಂದ ರೂ.2 ಲಕ್ಷ ಸಾಲ ಪಡೆದುಕೊಡಿದ್ದ ಎಂದರೆ, ಸಾಕ್ಷಿ ಅದನ್ನು ನಾನು ಮುಟ್ಟಿಸಿರುತ್ತೇನೆ ಎಂದು ನುಡಿಯುತ್ತಾರೆ.

ಅದೇ ರೀತಿ ನನ್ನ ಮಗ ಬೇರೆಯವರ ಹತ್ತಿರ ಎಷ್ಟು ಸಾಲ ಪಡೆದುಕೊಂಡಿದ್ದ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಪ್ರತಿವಾದಿ ಮಗ ಮನೋಜ ಎಂಬುವವರಿಂದ ನನ್ನ ಮಗ ಅನೀಲ್ ರೂ.50,000/- ಸಾಲ ಪಡೆದುಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಎಲ್ಲ ಸಾಲಗಳಲ್ಲಿ ಜಾಮೀನುದಾರ ಆಗಿ ಪ್ರತಿವಾದಿ ಇದ್ದ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಸಾಲ ತುಂಬದೇ ಇರುವ ಕಾರಣ ಮೇಲೆ ಹೇಳಿದ ಐರ್ಶಯ್ಯ ಫೈನಾನ್ಸ್ ರವರು ದಾವಾ ಸ್ವತ್ತುನ್ನು ಮಾರಾಟಕ್ಕೆ ತೆಗೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಸದರಿ ಮೇಲೆ ಹೇಳಿದ ಎಲ್ಲ ಫೈನಾನ್ಸ್ ಸಲಾವನ್ನು ಭರನಾ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ತಾನು ಸಾಲ ಮರಪಾವತಿ ಮಾಡಿದ ನಂತರ ನನ್ನನ್ನು ಮತ್ತು ನನ್ನ ಮಗನನ್ನು ವಾಪಸ್ ಕೊಡಿ ಎಂದು ಕೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಹಣ ವಾಪಸ್ ಕೇಳಿದಾಗ ನಾನು ಮತ್ತು ನನ್ನ ಮಗ ಕೂಡಿ ಇಂತಹ ಒಂದು ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**